ನನ್ನ ಅಭಿಪ್ರಾಯ ನನಗೆ. ನಾನು ಯಾವಾಗಲೂ ಅದೇ ಥರ ಯೋಚಿಸುವುದು.

ಈ ಪ್ರಶಸ್ತಿ ಯಾರಿಗೋ ನೀಡಿದ ಉತ್ತರ ಅಂತ ನಾನ್ಯಾವತ್ತೂ ಯೋಚಿಸಲಾರೆ. ಇದು ನಾವು ಮಾಡಿದ ಒಳ್ಳೆಯ ಕೆಲಸಕ್ಕೆ ಸಿಕ್ಕ ಪ್ರಶಂಸನೆ. ನಮ್ಮ ಇಡೀ ಚಿತ್ರತಂಡಕ್ಕೆ ಸಿಕ್ಕ ಪ್ರೋತ್ಸಾಹ. ಇದನ್ನು ನಾನು 'ಮೀ ಟೂ' ಅಭಿಯಾನದೊಂದಿಗೆ ಖಂಡಿತ ಜೋಡಿಸಲಾರೆ. ನಾನೂ ಅದನ್ನೇ ಮಾಡಿಬಿಟ್ಟರೆ ನನಗೂ ಅವರಿಗೂ ವ್ಯತ್ಯಾಸವೇ ಇರುವುದಿಲ್ಲ ಅಲ್ಲವೇ? ಅದು ಸರಿಯೂ ಅಲ್ಲ.

**◆ ಈ ವಿವಾದವನ್ನು ನಿಮ್ಮೊಳಗೆ ನೀವು ಮೀರಿಕೊಂಡಿದ್ದು ಹೇಗೆ?**

ಆ 'ಮೀ ಟೂ' ಅಭಿಯಾನದಲ್ಲಿ ಏನೇನಾಯ್ತೋ, ಹಾಗಾಗತ್ತೆ ಎಂದು ನಾನ್ಯಾವತ್ತೂ ಅಂದುಕೊಂಡಿರಲಿಲ್ಲ. ಆಗ ನನ್ನ ವಿರುದ್ಧ ನಡೆದ ಟೀಕೆಗಳು ಬರೀ ಅಭಿಪ್ರಾಯಭೇದ ಅಷ್ಟೇ ಅಲ್ಲ; ಸಂಪೂರ್ಣವಾಗಿ ನೆಗೆಟಿವ್ ಆಗಿದ್ದವು. ನಾವೊಂದು ಹೊಸ ವಾಹನವನ್ನು ತಂದಾಗ ಕಾಗೆಯೊಂದು ಅದರ ಮೇಲೆ ಪಿಚಿಕೆ ಹಾಕಿದರೆ ಹೇಗಿರತ್ತೆ ಹೇಳಿ? ಇದೂ ಹಾಗೆಯೇ ಇತ್ತು. ಗಾಡಿ ಗಲೀಜಾಯ್ತು; ನಿಜ. ಹಾಗಂತ ಅದನ್ನು ಡ್ರೈವ್ ಮಾಡದೇ ಬಿಡುವುದಕ್ಕಾಗುತ್ತದೆಯೇ? ಅದನ್ನೆಲ್ಲ ಮನಸಲ್ಲಿ ಇಟ್ಟುಕೊಂಡಿದ್ದರೆ ಪ್ರಯಾಣ ಮಾಡುವುದು ಸಾಧ್ಯವೇ ಇಲ್ಲ. ಮರೆತು ಮುಂದಕ್ಕೆ ಹೋಗುತ್ತಿರಬೇಕು ಅಷ್ಟೆ. ಅಂತರ್ಜಾಲ ಸಾಮಾಜಿಕ ಜಾಲತಾಣಗಳಲ್ಲಿ ಐಡೆಂಟಿಟಿಯೇ ಇರುವುದಿಲ್ಲ. ಅಲ್ಲಿ ಸಿಗುವ ಅನಾಮಧೇಯತೆಯನ್ನು ಬಳಸಿಕೊಂಡು ಮಾಡುವ ಟ್ರೋಲ್‌ಗಳು ಅವು. ಅವರಿಗೆ ನನ್ನ ಎದುರಿಗೆ ನಿಂತು ಮಾತನಾಡುವ ಧೈರ್ಯ ಇರುವುದಿಲ್ಲ. ಹಾಗಾಗಿ ಅವೆಲ್ಲ ನನ್ನ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ.

**◆ ವಿವಾದಗಳು, ವೈಯಕ್ತಿಕ ಬದುಕಿನ ಕಾರಣಗಳಿಂದ ಕೆಲವು ಕಾಲದಿಂದ ಚಿತ್ರರಂಗದಿಂದ ದೂರ ಇದ್ದೀರಿ. ನಿಮ್ಮೊಳಗಿನ ನಟಿ, ಸೃಜನಶೀಲ ವ್ಯಕ್ತಿ ಏನು ಮಾಡುತ್ತಿದ್ದಾಳೆ?**

ಅವಳು ಬೆಳೆಯುತ್ತಲೇ ಇದ್ದಾಳೆ. ಕಳೆದ ಆರು ವರ್ಷ ನಾನು ಒಂದು ರೇಸ್‌ನಲ್ಲಿರುವ ಹಾಗೆ ಕೆಲಸ ಮಾಡಿದ್ದೆ. ಈಗ ಒಂದು ಬಿಡುವು ತೆಗೆದುಕೊಂಡು ನನ್ನ ಕುಟುಂಬದ ಜೊತೆಗೆ ಕಾಲ ಕಳೆಯುತ್ತಿದ್ದೇನೆ. ಈ ಬಿಡುವಿನಲ್ಲಿ ನಾನು ತುಂಬಾ ಪುಸ್ತಕ ಓದುತ್ತಿದ್ದೆ. ಸಿನಿಮಾಗಳನ್ನು ನೋಡ್ತಿದ್ದೆ. ಮತ್ತೆ ಈಗ ರೇಸ್‌ಗೆ ಸಿದ್ಧಳಾಗಬೇಕು...

'ಟೆಸ್ಲಾ' ಕೆಲಸ ನಡೆಯುತ್ತಿದೆ. ಅದು ಯಾವ ರೀತಿಯಲ್ಲಿ ಬೆಳೆಯಬಹುದು ಎಂದು ನನಗಿನ್ನೂ ಗೊತ್ತಿಲ್ಲ. ಇನ್ನೊಂದು ಕಿರುಚಿತ್ರ ಮಾಡುವ ಆಲೋಚನೆಯಲ್ಲಿದ್ದೇನೆ. ಅದು ನೀರಿನ ಮಹತ್ವವನ್ನು ತಿಳಿಸುವ ಕಿರುಚಿತ್ರ. ಜಗತ್ತಿನಲ್ಲಿ ನೀರೇ ಇಲ್ಲದಿದ್ದರೆ ಹೇಗಿರುತ್ತದೆ ಎಂಬ ಪರಿಕಲ್ಪನೆ ಇಟ್ಟುಕೊಂಡು ಮಾಡಿರುವ ಚಿತ್ರವಿದು.

**◆ ನಿಮ್ಮ ಮಗಳು ಯಾವ ರೀತಿಯ ಜಗತ್ತಿನಲ್ಲಿ ಬೆಳೆಸಬೇಕು ಎಂಬ ಕನಸು ನಿಮಗಿದೆ?**

ನಾನು ಮತ್ತು ರಾಮ್ ಇಬ್ಬರಿಗೂ ಇವಳನ್ನು ಪೂರ್ತಿ ಸಿಟಿ ಹುಡುಗಿಯಾಗಿ ಬೆಳೆಸಬೇಕು ಎಂಬ ಆಸೆ ಇಲ್ಲ. ನಿಸರ್ಗದ ಮಡಿಲಿನಲ್ಲಿರುವ ಯಾವುದಾದರೂ ಜಾಗದಲ್ಲಿ ಅವಳನ್ನು ಬೆಳೆಸಬೇಕು ಅಂದುಕೊಂಡಿದ್ದೇವೆ. ಯಾಕೆಂದರೆ ನಗರದಲ್ಲಿ ಇಂದು ತುಂಬ ಬದಲಾವಣೆ, ಅಭಿವೃದ್ಧಿ ಆಗಿದೆ. ಆದರೆ ಅಲ್ಲಿನ ಮಕ್ಕಳು ಪ್ರಕೃತಿಯನ್ನು ಮಿಸ್ ಮಾಡಿಕೊಳ್ಳುತ್ತಿದ್ದಾರೆ. ಗಿಡಮರಗಳು ಕಾಣಸಿಗುವುದೇ ದುರ್ಲಭ. ಉಸಿರಾಟಕ್ಕೆ ತಾಜಾ ಗಾಳಿಯೂ ಇರುವುದಿಲ್ಲ. ದುರದೃಷ್ಟವಶಾತ್ ನಗರ ಬದುಕು ಅಷ್ಟೊಂದು ಆರೋಗ್ಯಪೂರ್ಣ ಆಗಿ ಉಳಿದಿಲ್ಲ.

ಅವಳು ಕಲಾವಿದೆಯಾಗಬೇಕು ಎನ್ನುವುದೇ ನನ್ನ ಆಸೆ. ಅವಳಿಗೆ ಸಂಗೀತ ಕಲಿಸಬೇಕು ಅನ್ನೋ ಆಸೆ ಇದೆ, ಡಾನ್ಸ್ ಕಲಿಸಬೇಕು ಅನ್ನೋ ಆಸೆ ಇದೆ. ಹಾಗೆಯೇ ಅವಳ ವಿದ್ಯಾಭ್ಯಾಸವನ್ನೂ ಮಾಮೂಲಿಗಿಂತ ಕೊಂಚ ಬೇರೆ ರೀತಿಯಲ್ಲಿ ನೀಡಬೇಕು ಎಂಬ ಯೋಚನೆ ಇದೆ. ಇವೆಲ್ಲ ನಮ್ಮ ಕನಸುಗಳು. ಎಷ್ಟು ಸಾಧ್ಯವಾಗುತ್ತದೆಯೋ ಗೊತ್ತಿಲ್ಲ. ನನ್ನ ಮತ್ತು ರಾಮ್ ಇಬ್ಬರ ಕೆರಿಯರ್ ಬಗ್ಗೆಯೂ ಗಮನಹರಿಸಬೇಕಿದೆ.



ಶ್ರುತಿ ಹರಿಹರನ್ ಚಿತ್ರ: ಅಭಿಷೇಕ್ ಎಸ್.ಎನ್.